# Special Talk On
# "Career Building, Job Opportunities & Competitive exams"
# By
# Career Guidance & Placement Cell
# In Association with
# Directorate of Employment and Training, Bangalore, Govt. of Karnataka

## 12-12-2018

## Resource Person

## Sri V Venkateshappa

## Deputy Director, Directorate of Employment and Training, Bangalore,

ದಿನಾಂಕ:೧೨.೦೧.೨೦೧೯ರ ಶನಿವಾರ ಪೂರ್ವಾಹ್ನ ೧೧.೦೦ ಗಂಟೆಗೆ ಕಾಲೇಜಿನ ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಉದ್ಯೋಗ ಮಾಹಿತಿ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಉಪನಿರ್ದೇಶಕರಾದ ಶ್ರೀ.ಎ.ವೆಂಕಟೇಶಪ್ಪರವರು ಆಗಮಿಸಿದ್ದರು. ಕಾರ್ಯಗಾರದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ವಹಿಸಿದ್ದರು. ಕಾರ್ಯಕ್ರಮದ ಸಂಪೂರ್ಣ ನಿರ್ವಹಣೆಯನ್ನು ಪ್ಲೇಸ್‌ಮೆಂಟ್ ಅಧಿಕಾರಿಯವರಾದ ಪ್ರೊ.ಎನ್.ಗೀತಾರವರು ನಿರ್ವಹಿಸಿದರು.



ಶ್ರೀ.ಎ.ವೆಂಕಟೇಶಪ್ಪನವರು ವಿದ್ಯಾರ್ಥಿಗಳಿಗೆ ಪದವಿ ಹಂತದಲ್ಲಿ ಮತ್ತು ಪದವಿ ಮುಗಿದ ಕೂಡಲೇ ಲಭ್ಯವಿರುವ ಹುದ್ದೆಗಳ ಆಯ್ಕೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಸಂಪೂರ್ಣ ಪರಿಚಯವನ್ನು ಮಾಡಿಕೊಟ್ಟರು. ಅಲ್ಲದೇ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧೀನ ಸಂಸ್ಥೆಗಳಲ್ಲಿರುವ ಹಾಗೂ ಸಾರ್ವಜನಿಕ ನಿರ್ವಹಣಾ ಸಂಸ್ಥೆಗಳಲ್ಲಿರುವ ಉದ್ಯೋಗಗಳ ಬಗ್ಗೆ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿರುವ ಮೀಸಲಾತಿಗಳ ಬಗ್ಗೆ, ವಯೋಮಿತಿ ಬಗ್ಗೆ ಹಾಗೂ ಸರ್ಕಾರಿ ಕೆಲಸಗಳನ್ನು ಪಡೆಯಬೇಕಾದರೆ ಎದುರಿಸಬೇಕಾಗಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವುದರ ಬಗ್ಗೆ ವಿದ್ಯಾರ್ಥಿಗಳಿಗೆ ವಿಷದವಾಗಿ ತಿಳಿಸಿಕೊಟ್ಟರು. ಅವರು ಮುಂದುವರೆದು ಪದವಿಯ ನಂತರ ದೇಶ ಹಾಗೂ ವಿದೇಶಗಳಲ್ಲಿ ಲಭ್ಯವಿರುವ ವಿವಿಧ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಕೋರ್ಸ್‌ಗಳು ಹಾಗೂ ಅವುಗಳಿಂದಾಗುವ ಉದ್ಯೋಗ ಲಭ್ಯತೆಗಳ ಸಂಪೂರ್ಣ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಪದವಿಯ ನಂತರ ಸೇರ ಬೇಕಾದ ಕೋರ್ಸುಗಳು, ಎದುರಿಸಬೇಕಾದ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ತೊಡಗಿಸಿಕೊಳ್ಳಬೇಕಾದ ಸ್ವ–ಉದ್ಯೋಗಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು.

ಡಾ.ಸಿಂಧು.ಸಿ.ಆರ್ ಅವರು ಸ್ವಾಗತಿಸಿ ವಂದಿಸಿದ ಕಾರ್ಯಕ್ರಮದಲ್ಲಿ ಶ್ರೀಮತಿ.ಲಾವಣ್ಯ.ಎಸ್ ಶ್ರೀಮತಿ.ಕುಮುದ.ಡಿ.ಆರ್, ಹಾಗೂ ಶ್ರೀಮತಿ.ಪಲ್ಲವಿ.ಡಿ ಅವರುಗಳು ಹಾಜರಿದ್ದರು. ಇದೊಂದು ಉದ್ಯೋಗ ಮತ್ತು ತರಬೇತಿಗೆ ಸಂಬಂಧಿಸಿದಂತೆ ಒಂದು ಅತ್ಯುತ್ತಮ ಕಾರ್ಯಕ್ರಮವಾಗಿತ್ತು.















